
ತಿರುವೊಂದು ಎದುರಾಯ್ತು. ಅದೊಂದು ಸಾಯಂಕಾಲ. ಚಿಕ್ಕಪ್ಪ ಬೇಗನೆ ಮನೆಗೆ ಬಂದ. ಪ್ರೀತಿಯ ಸಿಂಚನದಲ್ಲಿ ಹೊಸ ಮಣ್ಣಿನ ಮುದ್ದೆಗಳಂತಾಗಿದ್ದ ನಮ್ಮಿಬ್ಬರ ನಡುವೆ ಬಂಡೆಗಲ್ಲಿನಂತೆ ಬಂದುನಿಂತ. ಮಾತೇ ಇರಲಿಲ್ಲ. ಉರಿಯುವ ಕಣ್ಣುಗಳಲ್ಲಿ ಇರಿಯುವ ಪ್ರಶ್ನಾಚಿಹ್ನೆಯೊಂದು ಕದಲುತ್ತ ಕಂಗೆಡಿಸುತ್ತಿತ್ತು. ನಾನು ತಲೆ ತಗ್ಗಿಸಿದೆ. ಪ್ರೇಮಾ ತನ್ನ ಸಹಜ ಸ್ವಚ್ಛ ಸಮಚಿತ್ತದಿಂದ ಹಾಗೇ ನಿಂತಿದ್ದಳು. ಅವನೇನು ಕೇಳಿದರೂ ಸ್ಪಷ್ಟವಾಗಿ ಉತ್ತರಿಸುವ ದಿಟ್ಟತನ ಆಕೆಯ ನಿಲುವಿನಲ್ಲಿತ್ತು. ಅವಳ ವ್ಯಕ್ತಿತ್ವದ ಈ ವಿಶಿಷ್ಟ ಸಾಧ್ಯತೆಯೇ ಒಂದು ಸೆಳೆತವಾಗಿ ಪರಿಣಮಿಸುತ್ತಿತ್ತು. ಶಾಲೆಯಲ್ಲಿ ವಿದ್ಯಾರ್ಥಿಗಳಷ್ಟೇ ಅಲ್ಲ—ಅಧ್ಯಾಪಕರನ್ನೂ ಯಾವುದೇ ಅಳುಕಿಲ್ಲದೆ ಆಕೆ ಪ್ರಶ್ನಿಸುತ್ತಿದ್ದ ರೀತಿಯಿಂದಲೆ ಎಲ್ಲರ ಮನಸ್ಸಿನ ಬಹುಮಾನಗಳಿಗೆ ಅರ್ಹಳಾಗಿದ್ದಳು. ನಮ್ಮ ಒಲವಿನ ವಿಚಾರದಲ್ಲೂ ಹಿಂಜರಿತವಿಲ್ಲದ ನಿಖರ ನಿಲುವು ಅವಳದಾಗಿತ್ತು. ಮತ್ತೆ ಚಿಕ್ಕಪ್ಪ ಸುಮ್ಮನಿರಲಿಲ್ಲ. ರಾತ್ರಿಯಿಡೀ ನನಗೆ ಉಪದೇಶ ಮಾಡಿದ. ಸಾಕಷ್ಟು ಹೆದರಿಸಿದ. ಇನ್ನು ಹೀಗೇ ಮುಂದುವರಿದರೆ ಎದುರಿಸಬೇಕಾದ ವಿಪತ್ತುಗಳ ವಿಲಕ್ಷಣ ವ್ಯಪರೀತ್ಯಗಳನ್ನೆಲ್ಲಾ ನನ್ನೆದುರು ಬಿತ್ತರಿಸಿದ. ಜಾತಿಗಳ ನಡುವಿನ ಅಂತರಗಳನ್ನು ಕಡೆಗಣಿಸಿದರೆ ಊರೇ ಒಂದು ಕುರುಕ್ಷೇತ್ರವಾಗುವುದೆಂದು ಎಚ್ಚರಿಸಿದ. ಕಡೆಗಣಿಸಿ ಮುಂದುವರಿದರೆ ಕೈಕಾಲು ಮುರಿಯುವುದಾಗಿಯೂ ಹೇಳಿದ. ಮರುದಿನ ಮುಂಜಾನೆಗೇ ಓಡಿಹೋಗಿ ಅವಳಪ್ಪನ ತಲೆಗೆ ಹಚ್ಚಿ ತಾನು ನಿರಾಳವಾದ. ಅವರು ಅಂದು ಊರಲ್ಲಿ ಜಾತಿ, ಆಸ್ತಿ, ಅಂತಸ್ತು ಎಲ್ಲದರಲ್ಲೂ ತೀರ ಮೇಲಿನ ಹಂತದಲ್ಲಿದ್ದವರು. ರಾಜಕೀಯದಲ್ಲಿದ್ದು ಹಲವು ಸುಧಾರಣೆಗಳನ್ನೂ ಮಾಡಿದವರು. ಕೂಡಲೇ ಜಾಗೃತರಾದರು. ಓದಿನ ನೆಪದಲ್ಲಿ ಪ್ರೇಮಾಳನ್ನು ಮುಂಬಯಿಯ ಮಾವನ ಮನೆಗೆ ಕಳುಹಿಸಬೇಕಾದರೆ ಅದೆಷ್ಟು ಶ್ರಮಿಸಿದ್ದರೋ—ಯಶಸ್ವಿಯಾದರು—ಆಕೆ ಒಪ್ಪಿದಳೆ? ನನಗೆ ಗೊತ್ತಾಗಲಿಲ್ಲ.



ಒಂದು ದಿನ ಪ್ರೇಮಾಳ ಆಚೆಮನೆಯ ಸಣ್ಣ ಹುಡುಗನೊಬ್ಬ ನಮ್ಮ ಗೇಟಿನಲ್ಲಿ ಕಾಣಿಸಿಕೊಂಡ. ಓಡಿಹೋಗಿ ಸಮೀಪಿಸಿದೆ. ಹೆದರುತ್ತಲೇ ಚಡ್ಡಿ ಕಿಸೆಯಿಂದ ಪುಟ್ಟ ಕಾಗದದ ಕವರೊಂದನ್ನು ನನ್ನ ಕೈಗಿಟ್ಟು ಓಡಿಹೋದ. ಬದುಕಿನ ಒಟ್ಟು ಮೊತ್ತದ ಕಾತರವನ್ನೆಲ್ಲಾ ಕಣ್ಣಲ್ಲಿ ತುಂಬಿ ಬಿಡಿಸಿ ನೋಡಿದೆ. ನಾಲ್ಕೇ ವಾಕ್ಯಗಳು... "ನಮ್ಮ ಒಲವು ನಮ್ಮವರಾದ ಎಲ್ಲರಿಗೂ ಇಷ್ಟೊಂದು ನೋವು ನೀಡುವಂತಾಗುತ್ತಲ್ಲ— ಏನು ಮಾಡೋಣ? ಮತ್ತೆಲ್ಲರಿಗೂ